POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 26.10.2025

# ಕೆಜಿಎಫ್ ಡೈಲಾಗ್ ರೈಟರ್ ಚಂದ್ರ ಮೌಳಿ ನಿರ್ದೇಶನದ ದಿಲ್‌ಮಾರ್!



'ಅಲ್ಲಿ ತಮಟೆ ಹೊಡೀತಿದ್ದಾರೆ, ನನ್ನ ಬ್ರೈನ್ ಟಪ್ಪಾಂಗುಚ್ಚಿ ಡ್ಯಾನ್ಸ್ ಮಾಡು ಅಂತಿದೆ. ಆದರೆ ನಾನು ಇಯರ್‌ಫೋನ್‌ನಲ್ಲಿ ಪ್ಯಾಥೋ ಸಾಂಗ್ ಕೇಳ್ತೀನಿ. ಯಾಕೆಂದರೆ ನಾನು ಮಿದುಳಿನ ಗುಲಾಮ ಅಲ್ಲ!'

ಇದು ಸೈಕೋ ಶುಕ್ಲಾನ ಒಂದು ಡೈಲಾಗ್ ಮತ್ತು ಆ ಪಾತ್ರದ ಒಂದು ಮುಖ. ಆದರೆ ಸಿನಿಮಾದ ಆರಂಭದಲ್ಲಿ ಈ ಪಾತ್ರ ಎದುರಾಗೋದು ಹೃದಯದ ಗುಲಾಮನಾಗಿಯೇ! ಶಾನುಭೋಗರ ಮಗಳು ಅಕ್ಷತಾಳ ಒನ್ ವೇ ಪ್ರೇಮಿಯಾಗಿ... ಸುರಿಯುವ ಮಳೆಗೆ, ಕೆಲಸಗಾರರಿಂದ ಸಾಯುವಂತೆ ಹೊಡೆಸಿಕೊಂಡೂ ಪ್ರೇಮವನ್ನೇ ಉಸಿರಾಡುವ ಈತನ ಹಿನ್ನೆಲೆ ಇಂಟರೆಸ್ಟಿಂಗ್.

ಈತ ಅಷ್ಟು ಉತ್ಕಟವಾಗಿ ಆಕೆಯನ್ನು ಪ್ರೀತಿಸುವುದರ ಹಿಂದಿನ ಕಥೆಯನ್ನು ನಿರ್ದೇಶಕರು ಭಿನ್ನವಾಗಿ ಕಟ್ಟಿಕೊಟ್ಟಿದ್ದಾರೆ. ಈ ಸಿನಿವಾಾ ನಿರ್ದೇಶಕ ಚಂದ್ರಮೌಳಿ ಕೆಜಿಎಫ್ ಸಿನಿಮಾಕ್ಕೆ ಬರಹಗಾರರಾಗಿ ಕೆಲಸ ಮಾಡಿದವರು. ಆ ಕಾರಣದಿಂದಲೇ ಅವರ ನಿರ್ದೇಶನದ ಮೊದಲ ಸಿನಿಮಾ ಚಿತ್ರಕಥೆ, ಸಂಭಾಷಣೆಗಳಿಂದ ಗಮನ ಸೆಳೆಯುತ್ತದೆ. ಕೆಲವೊಮ್ಮೆ ಉಪೇಂದ್ರ ನೆನಪಾಗುತ್ತಾರೆ. ಫಸ್ಟ್ ಹಾಫ್‌ನಲ್ಲಂತೂ ಪ್ರತೀ ಡೈಲಾಗ್‌ನಲ್ಲೂ ಪಂಚಿಂಗ್ ಸಾಲುಗಳೇ ಬಂದು ಇದ್ಯಾಕೋ ಓವರ್ ಆಯ್ತಲ್ಲ... ಅನಿಸುವಾಗಲೇ ಅವರೊಳಗಿನ ಪಂಚಿಂಗ್ ಮ್ಯಾನ್ ಹಿನ್ನೆಲೆಗೆ ಸರಿದು ನಿಜವಾದ ಕಥೆಗಾರ ಮುಂದೆ ಬರುತ್ತಾನೆ.


ಚಂದ್ರಮೌಳಿ


ಸಾಯಿಕುಮಾರ್

ಸೆಕೆಂಡ್ ಹಾಫ್‌ನಲ್ಲಿ ಕಥೆ ಮತ್ತೊಂದು ಆಯಾಮ ಪಡೆದುಕೊಳ್ಳುತ್ತದೆ. ಇಲ್ಲಿ ಕೊಂಚ ಫೋಕಸ್ ಕಳೆದುಕೊಳ್ಳುವ ಕಥೆ ಕೊನೆಯಲ್ಲಿ ಮತ್ತೆ ಹಳಿಗೆ ಮರಳುತ್ತದೆ. ಕ್ಲೈಮ್ಯಾಕ್ಸ್ ಸ್ವಲ್ಪ ಅಬ್ರಪ್ಟ್ ಅನಿಸಿದರೂ ಹಳೇ ಸ್ಟೈಲನ್ನು ನಿರ್ದೇಶಕರು ಇಲ್ಲಿ ಮೀರಿದ್ದಾರೆ. ನಾಯಕ ರಾಮ್ ಸೈಕೋ ಶುಕ್ಲನೆಂಬ ವಿಲಕ್ಷಣ ಪಾತ್ರವನ್ನು ಸ್ವತಃ ಜೀವಿಸಿದ್ದಾರೆ! ಡಿಂಪಲ್ ಹಯಾತಿ, ಅದಿತಿ ಪ್ರಭುದೇವ ಇಬ್ಬರ ನಟನೆಯೂ ಚೆನ್ನಾಗಿದೆ. ಒಂದೊಳ್ಳೆ ಆ್ಯಕ್ಷನ್ ಹಾಗೂ ಲವ್ ಥ್ರಿಲ್ಲರ್ ಸಿನಿಮಾ ನೋಡಬೇಕು ಅಂತ ಆಸೆ ಪಡೋರಿಗೆ ಈ ಸಿನಿವಾಾ ರಸಗವಳ...


ಅಜಯ್‌ಗೌಡ

ಅಂದಹಾಗೆ, ಈ ಚಿತ್ರದ ಹೀರೋ ರಾವ್ ಗೌಡ ಶಿರಾ ತಾಲೂಕಿನ ಮಾನಂಗಿ ಗ್ರಾಮದವರು. ತಮ್ಮೂರಿನ ಹೈದ ಸಿನಿಮಾ ಹೀರೋ ಆಗಿದ್ದಾನೆ ಅನ್ನೋ ಖುಷಿಯಲ್ಲಿ ಆ ಗ್ರಾಮದ, ಶಿರಾ ತಾಲೂಕಿನ ಜನ ನಿಜಕ್ಕೂ ಹಬ್ಬ ಆಚರಿಸಿ ರಾವ್‌ಗೆ ಹಾರೈಸಿದ್ದಾರೆ. ಅದೇ ರೀತಿ ಬೆಂಗಳೂರು ಸಿಟಿ ಯಲ್ಲಿರೋ ಸ್ನೇಹಿತರು ಕೂಡ ರಾಮುಗೆ ಆಲ್ ದ ಬೆಸ್ಟ್ ಹೇಳಿ ಚಿತ್ರಮಂದಿರಗಳಿಗೆ ನುಗ್ಗುತ್ತಿದ್ದಾರೆ. ಇದು ರಾವ್ ಚಿತ್ರ ಅನ್ನುವುದಕ್ಕಿಂತ ಚಂದ್ರ ಮೌಳಿ ಸಿನಿಮಾ ಅನ್ನೋದೇ ಮುಖ್ಯ. ದಯವಿಟ್ಟು ಸಿನಿಮಾ ನೋಡಿ, ಹೊಸಬರನ್ನು ಬೆಳೆಸೋಣ....

# ಇಂಗ್ಲೀಷ್ ಭಾಷೆಗೆ ಡಬ್ ಆಗ್ತಿದೆ ಕಾಂತಾರ...!

ಹೊಂಬಾಳೆ ಫಿಲ್ಮ್ ಸಹಯೋಗದಲ್ಲಿ ದಿವೈನ್ ಸ್ಟಾರ್ ರಿಷಬ್ ಶೆಟ್ಟಿ ಚಿತ್ರಿಸಿರುವ ಬ್ಲಾಕ್ ಬಸ್ಟರ್ 'ಕಾಂತಾರ ಅಧ್ಯಾಯ-1' ದಾಖಲೆ ನಿರ್ಮಿಸುವತ್ತ ಹೆಜ್ಜೆ ಹಾಕಿದೆ.ಈ ಸಿನಿಮಾ ಈಗಾಗಲೇ ವಿಶ್ವದಾದ್ಯಂತ ಸಿನಿಮಾ 700 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿ 1000 ಕೋಟಿಯತ್ತ ಮುನ್ನುಗ್ಗುತ್ತಿದೆ! ಇಂಥ ಸಂದರ್ಭದಲ್ಲಿ ಈ ಚಿತ್ರವನ್ನ ರಿಷಬ್ ಇಂಗ್ಲೀಷ್ ಭಾಷೆಗೆ ಡಬ್ ಮಾಡಿ ಪ್ರಪಂಚದಾದ್ಯಂತ ಬಿಡುಗಡೆ ಮಾಡುವ ಯೋಜನೆ ರೂಪಿಸಿದ್ದಾರೆ.



ಭಾರತೀಯ ಚಿತ್ರರಂಗವೆ ಮೆಚ್ಚುವಂತೆ 200 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿ ಕರ್ನಾಟಕದಲ್ಲೇ ಹೊಸ ದಾಖಲೆ ಬರೆದಿದೆ. ಬರೀ ಮೈಸೂರಿನಲ್ಲಿಯೇ ಈ ಸಿನಿಮಾ 20 ದಿನಕ್ಕೆ 10 ಕೋಟಿ ರೂ.ಕಲೆಕ್ಷನ್ ಮಾಡಿದೆಯಂತೆ! ಇನ್ನೂ ಬೆಂಗಳೂರು ಮಹಾ ನಗರದಲ್ಲಿ ಅದೆಷ್ಟು ಕೊಳ್ಳೆ ಹೊಡೆದಿರಬಹುದೊ ಲೆಕ್ಕ ಹಾಕಿ. ಇಲ್ಲಂತು 1000 ಚಿಲ್ಲರೆ ಇದ್ರೂ ಮಲ್ಟಿಪ್ಲೆಕ್ಸ್ ಗಳಲ್ಲಿ ಟಿಕೆಟ್ ಸಿಗುತ್ತಿಲ್ಲ.... ಸಿಂಗಲ್ ಸ್ಕ್ರೀನ್‌ಗಳಲ್ಲೂ ಜನ ಜಾತ್ರೆ ಇದೆ. ಮಳೆಯನ್ನು ಲೆಕ್ಕಿಸದೆ ಬರ್ತಿದ್ದಾರೆ ಜನ. ಹೀಗೇ ಮುಂದುವರಿದರೆ ಕಾಂತಾರ 1000 ಕೋಟಿ ಕ್ಲಬ್ ಸೇರೋದು ಖಚಿತ ಎನ್ನುತ್ತಿದ್ದಾರೆ ಸಿನಿ ಪಂಡಿತರು.




ನೆರೆಯ ಆಂಧ್ರ, ತೆಲಂಗಾಣ ತಮಿಳುನಾಡು ಕೇರಳ ಎಲ್ಲಾ ಕಡೆ ಲೋಕಲ್ ಸಿನಿಮಾಗಳಿಗೆ ಸೆಡ್ಡು ಹೊಡೆದು ಮುನ್ನುಗ್ಗುತ್ತಿದೆ. ಬಹಳ ಮುಖ್ಯವಾಗಿ ಉತ್ತರದ ಹಿಂದಿ ಭಾಷಿಕರ ಹೃದಯ ಗೆದ್ದು ಬಿಟ್ಟಿದೆ ಕಾಂತಾರ! ದೆವ್ವ ಭೂತ ಪ್ರೇತಗಳ ಕಥೆ ಅಂದ್ರೆ ಇಂಗ್ಲೀಷ್ ನವರಿಗೂ ಬಹಳ ಇಷ್ಟ.ಹೀಗಾಗಿಯೇ ರಿಷಬ್ ಇಂಗ್ಲೀಷ್ ಭಾಷೆಗೆ ಡಬ್ ಮಾಡುತ್ತಿದ್ದಾರೆ. ಅಲ್ಲಿಗೆ, ಯಶ್ ನಟನೆಯ 'ಟಾಕ್ಸಿಕ್'ಗೆ ದೊರೆಯಬೇಕಾದ ಗೌರವ ಕಾಂತಾರಕ್ಕೆ ಈಗಲೇ ದೊರೆತಂತೆ ಆಗಲಿದೆ!



# ದಿವ್ಯ ಸುರೇಶ್ ಹಿಟ್-ರನ್ ಕೇಸ್!

ಮೈಸೂರು ರೋಡ್ ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ ಎಂ.ಎಂ. ಲೇನ್‌ನಲ್ಲಿ ಕಾರು ಚಲಾಯಿಸುತ್ತಿದ್ದಾಗ ಬೈಕ್‌ಗೆ ಡಿಕ್ಕಿ ಹೊಡೆದ ಆರೋಪದ ಮೇಲೆ ಕನ್ನಡದ ಬಿಗ್ ಬಾಸ್ ಸ್ಪರ್ಧಿ,ನಟಿ ದಿವ್ಯಾ ಸುರೇಶ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಕಳೆದ ಅಕ್ಟೋಬರ್ 4ರಂದು ಬೆಳಗಿನ ಜಾವ 1.30 ರ ಸುಮಾರಿಗೆ ಪೊಲೀಸ್ ಠಾಣೆಯಿಂದ ಕೆಲವೇ ಮೀಟರ್ ದೂರದಲ್ಲಿರುವ ಜಯಮ್ಮ ಟೀ ಸ್ಟಾಲ್ ಬಳಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಪೊಲೀಸ್ ತನಿಖೆಯಿಂದ ಈಗ ಪಸರ್ ಆಗಿದೆ. ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ಮೂವರು ಕೆಳಗೆ ಬಿದ್ದಿದ್ದು, ಈ ಪೈಕಿ ಓರ್ವ ಮಹಿಳೆ ಮೊಣಕಾಲಿಗೆ ಗಂಭೀರವಾಗಿ ಗಾಯವಾಗಿದ್ದ ಶಸ್ತ್ರಚಿಕಿತ್ಸೆ ಗೊಳಗಾಗಿದ್ದಾರೆಂದು ತಿಳಿದುಬಂದಿದೆ.

ಈ ಘಟನೆ ಸಂಬಂಧ ದೀಪಾಂಜಲಿ ನಗರದ ನಿವಾಸಿ ಜಿ ಕಿರಣ್ ಎಂಬುವರು ದೂರು ದಾಖಲಿಸಿದ್ದರು. ಸದರಿ ದೂರಿನ ಮೇರೆಗೆ ತನಿಖೆ ನಡೆಸಿದ ಪೊಲೀಸರು ಸಿಸಿಟಿವಿ ದೃಶ್ಯದ ಸಹಾಯದಿಂದ ಕಡೆಗೂ ದಿವ್ಯಳನ್ನು ಪತ್ತೆಹಚ್ಚಿದ್ದಾರೆ. ಕಿರಣ್ ಮತ್ತು ಅವರ ಸೋದರಸಂಬಂಧ ಗಳಾದ ಅನಿತಾ ಮತ್ತು ಅನುಷಾ ಆಸ್ಪತ್ರೆಗೆ ಹೋಗುತ್ತಿದ್ದಾಗ ಬೀದಿ ನಾಯಿಗಳು ಅವರ ಬೈಕನ್ನು ಬೆನ್ನಟ್ಟಲು ಪ್ರಾರಂಭಿಸಿದವು, ಈ ವೇಳೆ ತಿರುವು ತೆಗೆದುಕೊಳ್ಳುತ್ತಿದ್ದ ವೇಳೆ ಮಹಿಳೆಯೊಬ್ಬರು ಓಡಿಸುತ್ತಿದ್ದ ಕಪ್ಪು ಕಾರು ಅವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದರೂ ಮಹಿಳೆ ಕಾರು ನಿಲ್ಲಿಸದೆ ಪರಾರಿಯಾಗಿದ್ದಾರೆಂದು ದೂರಿನಲ್ಲಿ ತಿಳಿಸಿದ್ದಾರೆ.

ದೂರು ಬೆನ್ನಲ್ಲೇ ಕಾರನ್ನು ಪತ್ತೆ ಮಾಡಿರುವ ಪೊಲೀಸರು, ಬುಧವಾರ ದಿವ್ಯಾ ಸುರೇಶ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. 20 ದಿನಗಳಿಂದ ಪೊಲೀಸ್ ಕೈಗೆ ಸಿಗದೆ ಸುತ್ತಾಡುತ್ತಿದ್ದ ದಿವ್ಯ ಸುಂದ್ರಿ ಈಗ ಸಿಕ್ಕಾಕೊಂಡು ಏದುಸಿರು ಬಿಡ್ತಾ ಇದ್ದಾಳೆ. ಹಾಗೇ ಮಾಧ್ಯಮಗಳಿಗೂ ಸ್ವೀಟ್ ಸ್ಮೈಲ್ ಕೊಡ್ತಾ, ನಾವು ತಪ್ಪೇ ಮಾಡಿಲ್ಲ... ಮಾಡಿದ್ರೆ ಶಿಕ್ಷೆ ಆಗುತ್ತೆ ಬಿಡಿ... ಕಾನೂನು ಎಲ್ಲರಿಗೂ ಒಂದೇ... ಎಂದು ಸತ್ಯ ಹರಿಶ್ಚಂದ್ರಿಯಂತೆ ಮಾತಾಡಿದ್ದಾಳೆ!

Vol. 41 No. 21 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com